

ಕಳಿಸಿದ್ದ ರಷ್ಯಾ, ಅದನ್ನು ವೈಜ್ಞಾನಿಕ ಸಾಧನೆ ಎಂದು ಬಿಂಬಿಸದೆ, ತಮ್ಮ ಕಮ್ಯುನಿಸ್ಟ್ ರಾಷ್ಟ್ರ ಮಹಿಳಾ ಸಮಾನತೆಯನ್ನು ಸಾಧಿಸಿದ ಮೊದಲ ದೇಶ ಎಂದು ರಾಜಕೀಯ ಲಾಭ ಪಡೆಯಲು ಯತ್ನಿಸಿತ್ತು. ಅಷ್ಟಾದರೂ ಮಹಿಳೆಯೊಬ್ಬಳು ಮತ್ತೆ ಬಾಹ್ಯಾಕಾಶ ಪ್ರವೇಶ ಮಾಡಲು 19 ವರ್ಷ ಹಿಡಿಯಿತು.

## ದೊಡ್ಡಣ್ಣನೂ ಹೊರತಲ್ಲ

ಅಮೆರಿಕದಲ್ಲಿ ಮಿಲಿಟರಿ ಟೆಸ್ಟ್ ಪೈಲಟ್‌ಗಳು ಮಾತ್ರ ಬಾಹ್ಯಾಕಾಶ ಮಾಡಬಹುದೆಂಬ ಕಟ್ಟಳೆಯಿತ್ತು. ಆದರೆ ಆ ಹುದ್ದೆಗೆ ಮಹಿಳೆಯರಿಗೆ ಪ್ರವೇಶವೇ ಇರಲಿಲ್ಲ. ಇದನ್ನು ಸವಾಲಾಗಿ ಸ್ವೀಕರಿಸಿದ ಏರೋಸ್ಪೇಸ್ ವೈದ್ಯೆ ರ್‍ಯಾಂಡಿ ಲೊವ್‌ಲೇಸ್ 1960ರಲ್ಲಿ ಮೊದಲ 13 ಮಹಿಳಾ ಗಗನಯಾತ್ರಿಗಳ ತಂಡವನ್ನು ರಚಿಸಿ, ಅವರಿಗೆ ಎಲ್ಲ ಬಗೆಯ ತರಬೇತಿ ನೀಡಿ, ಅವರ ಭೌತಿಕ ಹಾಗೂ ಮಾನಸಿಕ ತಾಕತ್ತನ್ನು ಸಮಗ್ರವಾಗಿ ಪರೀಕ್ಷಿಸಿ, ‘ಅವರೆಲ್ಲ ಬಾಹ್ಯಾಕಾಶಕ್ಕೆ ಹಾರಲು ರೆಡಿ’ ಎಂದು ಪ್ರಮಾಣಿಸಿದ್ದರು. ಜೀರಿ ಕ್ಯಾಬ್ ಎಂಬ 28 ವರ್ಷದ ಮಹಿಳಾ ಪೈಲಟ್‌ಗೆ 7000 ಗಂಟೆ ವಿಮಾನ ಹಾರಾಟ ನಡೆಸಿದ ಅನುಭವವಿತ್ತು. ಮೂರು ವಿಶ್ವದಾಖಲೆಗಳು ಆಕೆಯ ಹೆಸರಲ್ಲಿದ್ದವು. ಆಕೆಯ ಕಿವಿಯಲ್ಲಿ ಐಸ್‌ಕೋಲ್ಡ್ ನೀರನ್ನು ಹಾಕಿ, ಆಕೆಯ ಸಮತೋಲನ ಸರಿ ಇದೆಯೆ ಎಂಬ ಕಠಿಣ ಪರೀಕ್ಷೆ ಮಾಡಲಾಗಿತ್ತು. ಎಲ್ಲ ಹಂತಗಳ ಪರೀಕ್ಷೆಯಲ್ಲಿ ಉತ್ತೀರ್ಣರಾದರೂ ಆ 13 ಜನರಲ್ಲಿ ಯಾರೊಬ್ಬರಿಗೂ ಬಾಹ್ಯಾಕಾಶಕ್ಕೆ ಹೋಗುವ ಅವಕಾಶ ಸಿಗಲಿಲ್ಲ. ಇದರಿಂದ ಬೇಸರಗೊಂಡ ಜೀರಿ ಕ್ಯಾಬ್, ‘ನ್ಯೂ ಮೆಕ್ಸಿಕೋದಲ್ಲಿ ಅಂತರಿಕ್ಷಕ್ಕೆ ಕಳಿಸಲು ಚಿಂಪಾಂಜಿಗಳನ್ನು ತರಬೇತಿಗೊಳಿಸಲಾಗುತ್ತಿದೆ, ಅದರಲ್ಲಿ ಗ್ಲೆಂಡಾ ಎಂಬ ಹೆಣ್ಣು ಚಿಂಪಾಂಜಿ ಇದೆ. ನಾನೂ ಹೆಣ್ಣೇ, ಚಿಂಪಾಂಜಿಗೆ ನೀಡುವ ತರಬೇತಿಯನ್ನು ನನಗೂ ನೀಡಲಿ, ನಾನು ಚಿಂಪಾಂಜಿಯಾಗಲು ರೆಡಿ’ ಎಂದು ನೊಂದು ನುಡಿದಿದ್ದರು. ‘ನಾಸಾ’ದ ತಾರತಮ್ಯ ಧೋರಣೆಯಿಂದಾಗಿ ರಷ್ಯಾದ ಬಾಹ್ಯಾಕಾಶ ಸಾಧನೆಯನ್ನು ಸರಿಗಟ್ಟಲು ಅಮೆರಿಕ ಸುಮಾರು 20 ವರ್ಷ ಕಾಯಬೇಕಾಯಿತು.

ಇದುವರೆಗೆ ವಿಶ್ವದಾದ್ಯಂತ 6 ಚಂದ್ರಯಾನಗಳು ಯಶಸ್ವಿಯಾಗಿ ನಡೆದಿವೆ. 12 ಗಗನ ಯಾತ್ರಿಗಳು ಚಂದ್ರನ ನೆಲ ತುಳಿದಿದ್ದಾರೆ. ಅವರೆಲ್ಲ ಪುರುಷರೇ! ಅಮೆರಿಕ, ಜಪಾನ್, ರಷ್ಯಾ, ಕೆನಡ ಮತ್ತು ಯೂರೋಪಿಯನ್ ಸ್ಪೇಸ್ ಏಜೆನ್ಸಿಯವರು ಸೇರಿ ನಿರ್ಮಿಸಿರುವ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಪುರುಷ ಹಾಗೂ ಮಹಿಳಾ ವಿಜ್ಞಾನಿಗಳಿಬ್ಬರೂ ಹಲವು ಬಾರಿ ಹೋಗಿ ಭೂಮಿಗೆ ಮರಳಿದ್ದಾರೆ. ಈ ಯಾತ್ರೆಗಳಲ್ಲಿ ಪುರುಷರಿಗೆ ಸಿಕ್ಕಷ್ಟು ಪ್ರಾಶಸ್ತ್ಯ ಮಹಿಳೆಯರಿಗೆ ದೊರಕಿಲ್ಲ. ‘ನಾಸಾ’ದ ನಿರ್ದೇಶಕ ಕೆನ್ ಬೊವರ್ ಸಾಕ್ಸ್, ‘ಮಹಿಳೆಯರ ತೆಳು ಮೈಕಟ್ಟು ಮತ್ತು ಕಡಿಮೆ ಎತ್ತರಗಳು ಸ್ಪೇಸ್ ಸೂಟ್‌ಗೆ ಸರಿ ಹೊಂದುವುದಿಲ್ಲ, ಬಾಹ್ಯಾಕಾಶ ಯಾನವೇನಿದ್ದರೂ ಪುರುಷರಿಗೆ’ ಎಂಬ ಮೂರ್ಖತನದ ಮಾತನಾಡಿದ್ದ. ಈತನ ಈ ದರಿದ್ರ ಧೋರಣೆಗೆ ಪ್ರತಿಭಟನೆಯಾಗದಿರುವುದು ದೊಡ್ಡ ಆಶ್ಚರ್ಯ.

## ಕೊನೆಯಾಗಲಿ ಸಣ್ಣತನ

1982ರಲ್ಲಿ ರಷ್ಯಾದ ಸ್ವೆಟ್ಲಾನ ಸವಿಟ್ಸಕಾಯ ವಿಶ್ವದ ಮೊದಲ ಬಾಹ್ಯಾಕಾಶ ನಡಿಗೆ ಮುಗಿಸಿ ಹಿಂದಿರುಗಿ ಬಂದ ಮೇಲೆ, ಆಕೆಯ ಸಾಧನೆಯನ್ನು ಮೇಲುನೋಟಕ್ಕೆ ಅಭಿನಂದಿಸಿದ ಪುರುಷ ಸಹೋದ್ಯೋಗಿಗಳು, ಆಕೆಯ ಕೈಗೆ ಕಿಚನ್ ಏಪ್ರನ್ ನೀಡಿ – ‘ನಿನ್ನ ಜಾಗವೇನಿದ್ದರೂ ಇನ್ನು ಅಡುಗೆಮನೆಯಲ್ಲೇ’ ಎಂದು ಮೂದಲಿಸಿದ್ದರು. ನಮ್ಮ ‘ಗಗನಯಾನ್’ **(Gaganyaan)** ಯೋಜನೆಗೆ ಭಾರತೀಯ ವಾಯುಸೇನೆಯ ನಾಲ್ಕು ಪೈಲಟ್‌ಗಳು ಆಯ್ಕೆಯಾಗಿ ರಷ್ಯಾದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಅವರಲ್ಲಿ ಒಬ್ಬ ಮಹಿಳೆಯೂ ಇಲ್ಲ. ಈಗ ರಷ್ಯಾದ ಪಾರ್ಲಿಮೆಂಟ್‌ನ ನಾಮಕರಣ ಸದಸ್ಯೆಯಾಗಿರುವ 83 ವರ್ಷ ವಯಸ್ಸಿನ ವೆಲೆಂಟಿನಾ ತೆರೆಶ್ಕೊವ, ‘ನನ್ನ